ದಿನಾಂಕಃ 02-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಜಿ ಎಸ್ ವಕೀಲರಿಂದಃ**

ನಾನು ಹಾಜರುಪಡಿಸಿದ ನಿಪಿ-4,5 ಮತ್ತು 7 ರಲ್ಲಿ ನಮೂದಿಸಿರುವ ಆಸ್ತಿಗಳ ಚೆಕ್ಕುಬಂದಿಗಳು ಮತ್ತು ದಾವಾಸ್ತಿಯ ಚೆಕ್ಕುಬಂದಿ ಒಂದಕ್ಕೊಂದು ತಾಳೆಯಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-7 ರಂತೆ ಖರೀದಿಸಿದ ಆಸ್ತಿ ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನಾಗಿದ್ದು, ಸದರಿ ಜಮೀನಿನಲ್ಲಿ ಸಾಗುವ ಮಾಡದೆ ಇದ್ದರು ಸಹ ನಿಪಿ-1 ರಿಂದ 5 ಮತ್ತು 7 ರಿಂದ 14 ರಂತೆ ದಾಖಲೆಗಳನ್ನು ಸೃಷ್ಟಿಸಿ ಸದರಿ ದಾವಾಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದೆನೆ ಎಂದು ಸುಳ್ಳು ದಾವೆ ಹೂಡಿದ್ದೆನೆ ಎಂದರೆ ಸರಿಯಲ್ಲ. ಸರ್ವೆ ನಂ 107 ರ ಜಮೀನು ಶರ್ಪುನ್ನೀಸಾರವರಿಗೆ ಸೇರಿದ್ದು, ಸರ್ವೆ ನಂ 108 ರ ಜಮೀನು ನನಗೆ ಸೇರಿದ್ದು , ಸರ್ವೆ ನಂ 17 ರ ಜಮೀನು ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಸರ್ವೆ ನಂಬರಿನ ವಿಸ್ತೀರ್ಣ ಹೆಚ್ಚಿಗೆ ಇದ್ದು ಸದರಿ ಸರ್ವೆ ನಂಬರಿನಲ್ಲಿ ಈ ಎಲ್ಲಾ ಸರ್ವೆ ನಂಬರುಗಳು ಪೋಡಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ 99 ರ ಜಮೀನು ಟಿ.ಗೋವಿಂದಪ್ಪ ಎನ್ನುವವರಿಗೆ ಸೇರಿದ್ದು ಸರ್ವೆ ನಂ 98 ರ ಜಮೀನು ನನಗೆ ಸೇರಿದ್ದು, ಸರ್ವೆ ನಂ 96 ರ ಜಮೀನು ಹಿರಿಯಮ್ಮನವರಿಗೆ ಸೇರಿರುತ್ತದೆ. ನಾನು ಸರ್ವೆ ನಂ 103 ಮತ್ತು 104 ರ ಜಮೀನಿನಲ್ಲಿ ಸ್ವಾಧೀನದಲ್ಲಿರುವ ಪ್ರತಿವಾದಿಗಳ ಸ್ವಾಧೀನವನ್ನು ತಪ್ಪಿಸಲು ಈ ದಾವೆ ಹೂಡಿದ್ದೆನೆ ಎಂದರೆ ಸಾಕ್ಷಿ ಸದರಿ ಪ್ರತಿವಾದಿ ನನ್ನ ಜಮೀನಿನ ಪಕ್ಕದಲ್ಲಿ ಇಲ್ಲ ಮತ್ತು ಪ್ರತಿವಾದಿ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾಸ್ತಿಯನ್ನು ಖರೀದಿಸುವ ಸಮಯಕ್ಕೆ ಅಳತೆಯನ್ನು ಮಾಡಿಸಿದ್ದೀರ ಎಂದರೆ ಸಾಕ್ಷಿ ನಾವು ಮಾಡಿಸಿರುವುದಿಲ್ಲ, ನಾವು ಖರೀದಿಸುವ ಮುನ್ನ ಮಾರಾಟಗಾರರು ಮಾಡಿಸಿದ್ದರು ಎಂದು ನುಡಿಯುತ್ತಾರೆ. ಹಾಗಾಗಿ ಸದರಿ ಮಾರಾಟಗಾರರು ನಮೂದಿಸಿರುವ ಚೆಕ್ಕುಬಂದಿಯನ್ನು ನೋಡಿ ನಾನು ದಾವಾಸ್ತಿಯನ್ನು ಖರೀದಿಸಿದೆ ಎಂದರೆ ಸರಿ. ನಾನು ಮತ್ತು ಮಾರಾಟಗಾರರು ಸೇರಿಕೊಂಡು ದಾವಾಸ್ತಿಯ ಚೆಕ್ಕುಬಂದಿಯನ್ನು ಸುಳ್ಳು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.